**ಓ.ಎಸ್. ನಂಃ 528/2017**

**ಪಿ.ಡಬ್ಲ್ಯೂಃ 1**

**ದಿನಾಂಕ 27.06.2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ವಾದಿಯ ಪರಃ ಶ್ರೀ ಎಮ್.ಸಿ.ವಿ.ಕೆ ವಕೀಲರಿಂದಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ರೂಪದಲ್ಲಿ ಸಲ್ಲಿಸುತ್ತಿದ್ದು ಅದನ್ನು ನನ್ನ ಮಾಹಿತಿ ಮೇರೆಗೆ ನನ್ನ ವಕೀಲರು ತಯಾರಿಸಿರುತ್ತಾರೆ. ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ಪಹಣಿಗಳನ್ನು ನಿಪಿ.1 ರಿಂದ 6 ಎಂದು, ರೆಕಾರ್ಡ ಆಫ್ ರೈಟ್ಸ ನಿಪಿ.7 ಎಂದು, ಇಂಡೆಕ್ಸ ಆಫ್ ಲ್ಯಾಂಡ ನಿಪಿ.8 ಎಂದು, ವಂಶವೃಕ್ಷವನ್ನು ನಿಪಿ.9 ಎಂದು, ನಮೂನೆ.7 ರ ದೃಡಿಕೃತ ನಕಲು ನಿಪಿ.10 ಎಂದು, ನಮೂನೆ.7 ರ ದೃಡಿಕೃತ ನಕಲು ನಿಪಿ.11 ಎಂದು, ಭೂ ನ್ಯಾಯ ಮಂಡಳಿಯವರು ಹೊರಡಿಸಿದ ಆದೇಶದ ದೃಡಿಕೃತ ನಕಲು ನಿಪಿ.12 ಎಂದು, ನೋಟಿಸಿನ ದೃಡಿಕೃತ ನಕಲನ್ನು ನಿಪಿ.13 ಎಂದು, ರಸೀದಿಯ ದೃಡಿಕೃತ ನಕಲನ್ನು ನಿಪಿ.14 ಎಂದು, 2 ಹಿಂಬರಹಗಳನ್ನು ನಿಪಿ.15 ಮತ್ತು 16 ಎಂದು, ವರ್ಗಾವಣೆ ಆದೇಶ ನಿಪಿ.17 ಎಂದು, ನಮೂನೆ.3 ರ ದೃಡಿಕೃತ ನಕಲನ್ನು ನಿಪಿ.18 ಎಂದು, ಆಖಾರಬಂದ ನಿಪಿ.19 ಎಂದು, ನಮೂನೆ.1 ರ ದೃಡಿಕೃತ ನಕಲು ನಿಪಿ.20 ಎಂದು, ದಿನಾಂಕ 01.08.2017 ರಂದು ನೀಡಿದ ಕಚೇರಿ ಪ್ರತಿಯನ್ನು ನಿಪಿ.21 ಎಂದು, ಅಂಚೆ ರಸೀದಿಗಳನ್ನು ನಿಪಿ.22 ರಿಂದ 27 ಎಂದು, ಅಂಚೆ ಸ್ವೀಕೃತಿಗಳನ್ನು ನಿಪಿ.28 ರಿಂದ 31 ಎಂದು, ದಿನಾಂಕ 08.08.2017 ರಂದು ತಹಸೀಲ್ದಾರವರಿಗೆ ಹೊರಡಿಸಿದ ನೋಟಿಸನ್ನು ನಿಪಿ.32 ಎಂದು, ದಿನಾಂಕ 11.08.2017 ರಂದು

ತಹಸೀಲ್ದಾರವರು ನೀಡಿದ ಉತ್ತರವನ್ನು ನಿಪಿ.33 ಮತ್ತು 34 ಎಂದು ಗುರುತಿಸಲಾಯಿತು.

**ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗಾಗಿ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**
**ಕೆ.ಆರ್.ನಗರ**